
5:6

ಕೊಳಗೇರಿ ಬಂಧುಗಳಿಗೆ ಅರ್ಪಣೆ



# ಸ್ಲಂ ಜಗತ್ತು ಒಂದು ಒಳನೋಟ

Kolageri Bandhu
The Slum World
Y. J. Rajendra
Pub: Jana Sahayog
dedicated to Slum dwellers
A brief overview of Slums

ಲೇಖಕರು: ವೈ.ಜೆ. ರಾಜೇಂದ್ರ

ಪ್ರಕಾಶಕರು: **ಜನ ಸಹಯೋಗ**

ನಗರ ಸಂಪನ್ಮೂಲ ಕೇಂದ್ರ

## ಕರ್ನಾಟಕ ರಾಜ್ಯದ ಕೊಳಗೇರಿ ಕುರಿತ ಕೆಲವು ಅಂಕಿ ಅಂಶಗಳು

- ರಾಜ್ಯದ ಜಿಲ್ಲೆಗಳ ಸಂಖ್ಯೆ : 27
- ರಾಜ್ಯದ ಜಿಲ್ಲಾ ಕೇಂದ್ರಗಳ ಸಂಖ್ಯೆ : 27
- ಸ್ಲಂಗಳನ್ನು ಗುರುತಿಸಲಾಗಿರುವ ಪಟ್ಟಣಗಳ ಸಂಖ್ಯೆ : 164
- ಸರಕಾರಿ ದಾಖಲೆಗಳ ಪ್ರಕಾರ ಒಟ್ಟು ಸ್ಲಂಗಳ ಸಂಖ್ಯೆ : 1977
- 1999ರ ಅಂದಾಜಿನ ಪ್ರಕಾರ ಕೊಳಗೇರಿಗಳ ಸಂಖ್ಯೆ : 4500
- ಸರಕಾರಿ ದಾಖಲೆಗಳ ಪ್ರಕಾರ ಗುಡಿಸಲುಗಳ ಸಂಖ್ಯೆ : 1,94,628
- 1999ರ ಅಂದಾಜಿನ ಪ್ರಕಾರ ಗುಡಿಸಲುಗಳ ಸಂಖ್ಯೆ : 4,50,000
- ಸರಕಾರಿ ದಾಖಲೆಗಳ ಪ್ರಕಾರ ಜನಸಂಖ್ಯೆ : 10,20,746
- 1999ರ ಅಂದಾಜಿನ ಪ್ರಕಾರ ಜನಸಂಖ್ಯೆ : 30,80,000

## ಅತಿ ಹೆಚ್ಚು ಸ್ಲಂಗಳನ್ನು ಹೊಂದಿದ 3 ನಗರಗಳು ಹಾಗೂ ಜನಸಂಖ್ಯೆ

| | ನಗರಗಳು | ಸ್ಲಂಗಳ ಸಂಖ್ಯೆ | ಜನಸಂಖ್ಯೆ |
|---|---|---|---|
| 1. | ಬೆಂಗಳೂರು(ನಗರ) | 770 | 12.5 ಲಕ್ಷ |
| 2. | ಬಳ್ಳಾರಿ (ಜಿಲ್ಲೆ) | 210 | 1.6 ಲಕ್ಷ |
| 3. | ಬಿಜಾಪುರ(ಜಿಲ್ಲೆ) | 174 | 2.3 ಲಕ್ಷ |
| | ಒಟ್ಟು | 1154 | 16.4 ಲಕ್ಷ |

## ಸರಕಾರಿ ದಾಖಲೆಗಳ ಪ್ರಕಾರ ಸ್ಲಂ ನಿವಾಸಿಗಳ ಜಾತಿವಾರು ಅಂಕಿ ಸಂಖ್ಯೆ

| | ಜಾತಿಗಳು | ಅಂಕಿ ಸಂಖ್ಯೆ |
|---|---|---|
| 1. | ಪರಿಶಿಷ್ಟ ಜಾತಿ | 295077 |
| 2. | ಪರಿಶಿಷ್ಟ ಪಂಗಡ | 156737 |
| 3. | ಇತರ ಹಿಂದುಳಿದ ಜಾತಿಗಳು | 546749 |
| | ಒಟ್ಟು | 997963 |

## ಸ್ಲಂ ಕಾಯ್ದೆಯ ಅನ್ವಯ ಸ್ಲಂಗಳ ಸ್ಥಾನಮಾನ ಕುರಿತು ಅಂಕಿ ಅಂಶಗಳು - ಜಿಲ್ಲಾವಾರು

| ಕ್ರ.ಸಂ. | ಜಿಲ್ಲೆ | ಐಡಿಎಫ್ | 3ಪಿ | 3ಎಫ್ | 11ಪಿ | 11ಎಫ್ | 17ಪಿ | 17ಎಫ್ | ಒಟ್ಟು |
|---|---|---|---|---|---|---|---|---|---|
| 1. | ಬೆಂಗಳೂರು ಗ್ರಾಮಾಂತರ | 17 | 9 | 27 | - | 8 | - | - | 61 |
| 2. | ಹಾವೇರಿ | 10 | 8 | 35 | - | 2 | - | - | 55 |
| 3. | ರಾಯಚೂರು | 35 | 2 | 30 | 4 | 3 | - | - | 74 |
| 4. | ಹುಬ್ಬಳ್ಳಿ-ಧಾರವಾಡ | 18 | 7 | 19 | - | 15 | 1 | 10 | 70 |
| 5. | ಕೊಪ್ಪಳ | 12 | 1 | 40 | - | 2 | - | - | 55 |
| 6. | ತುಮಕೂರು | 22 | 9 | 54 | - | 1 | - | - | 86 |
| 7. | ಮಂಡ್ಯ | 7 | 6 | 33 | 2 | 7 | - | - | 55 |
| 8. | ಕೊಡಗು | 3 | - | 3 | - | - | - | - | 6 |
| 9. | ಕೋಲಾರ | 19 | 1 | 51 | 1 | 2 | - | - | [illegible] |
| 10 | ಮಂಗಳೂರು | 12 | 9 | - | - | - | - | - | 21 |
| 11. | ಉತ್ತರ ಕನ್ನಡ | 34 | 14 | 12 | - | 4 | - | - | 64 |
| 12. | ಬೆಳಗಾಂ | 5 | 5 | 13 | - | - | - | - | 23 |
| 13. | ಉಡುಪಿ | - | 3 | 9 | - | - | - | - | 12 |
| 14. | ಹಾಸನ | 16 | 24 | 45 | 3 | 2 | - | - | 90 |
| 15. | ಮೈಸೂರು | 38 | 10 | 34 | 1 | 7 | - | - | 90 |
| 16. | ಶಿವಮೊಗ್ಗ | 3 | 38 | 77 | - | 2 | - | - | 120 |
| 17. | ಚಿತ್ರದುರ್ಗ | 2 | 18 | 7 | - | - | - | - | 27 |
| 18. | ದಾವಣಗೆರೆ | 12 | 12 | 26 | - | 1 | - | - | 51 |
| 19. | ಚಿಕ್ಕಮಗಳೂರು | 7 | 12 | 29 | - | - | - | - | 48 |
| 20. | ಗುಲ್ಬರ್ಗಾ | 45 | - | 40 | - | 1 | - | - | 86 |
| 21. | ಬೀದರ್ | 34 | - | 31 | - | - | - | - | 65 |
| 22. | ಬಿಜಾಪುರ | 61 | - | 48 | 1 | 5 | - | - | 115 |
| 23. | ಬಾಗಲಕೋಟೆ | 21 | - | 17 | - | - | - | - | 38 |
| 24. | ಚಾಮರಾಜನಗರ | 27 | 3 | 21 | - | 3 | - | - | 54 |
| 25. | ಬಳ್ಳಾರಿ | 56 | 16 | 58 | 1 | 1 | - | 1 | 133 |
| 26. | ಗದಗ | 6 | 2 | 15 | - | 2 | 2 | - | [illegible] |
| 27. | ಬೆಂಗಳೂರು ನಗರ | 165 | 64 | 86 | 4 | 28 | - | 15 | [illegible] |
| | ಒಟ್ಟು | 687 | 273 | 860 | 17 | 96 | 3 | 26 | 1962 |

*ಮಾಹಿತಿ ಮೂಲ : ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಪತ್ರ*

**IDF ಕಾಲಂನಲ್ಲಿರುವ 687 ಕೊಳಗೇರಿಗಳು ಕಾನೂನಿನ ಚೌಕಟ್ಟಿಗೆ ಬಂದಿರುವುದಿಲ್ಲ. 273 ಸ್ಲಂಗಳನ್ನು 3P ಎಂದು ಘೋಷಿಸಲಾಗಿದ್ದರೂ ಅವು ಪೂರ್ಣವಾಗಿ ಕಾನೂನಿನ ಚೌಕಟ್ಟಿಗೆ ಬರಬೇಕಾಗಿದೆ. 11 P ಮತ್ತು F ಕಾಲಂಗಳಲ್ಲಿರುವ 113 ಸ್ಲಂಗಳ ಅಭಿವೃದ್ಧಿ ಅಥವಾ ನಿರ್ಮೂಲನೆಗಾಗಿ ಘೋಷಿಸಲಾಗಿದೆ. ಇಲ್ಲಿ ಬೇರೆ ಸ್ಥಳಗಳಿಗೆ ಜನರನ್ನು ಸ್ಥಳಾಂತರಿಸುವ ಸಾಧ್ಯತೆ ಇದೆ. ಇದರ ಮಾಹಿತಿಯನ್ನು ಅಲ್ಲಿಯ ಜನ ತಿಳಿಯುವ ಅವಶ್ಯಕತೆ ಇದೆ.**



## ಜಿಲ್ಲಾವಾರು ಸ್ಲಂಗಳು ಮತ್ತು ಭೂಮಾಲಿಕತ್ವ

| ಕ್ರ.ಸಂ. | ಜಿಲ್ಲೆ | ಖಾ | ಸರ್ಕಾರಿ | ಟಿಎಂಸಿ | ಸಿಎಂಸಿ | ರೈಲ್ವೆ | ಜಿ.ಪಿ. | ಕೆಎಸ್‌ಸಿಬಿ | ಬಿಸಿಸಿ | ಸಿಡಿಎ | ಇತರೆ |
|---|---|---|---|---|---|---|---|---|---|---|---|
| 1. | ಬೆಂಗಳೂರು ಗ್ರಾಮಾಂತರ | 46 | 4 | 12 | - | - | - | - | - | - | - |
| 2. | ಹಾವೇರಿ | 31 | 9 | 9 | 3 | - | - | - | - | - | 2 |
| 3. | ರಾಯಚೂರು | 11 | 20 | 26 | 13 | 1 | 3 | - | - | - | - |
| 4. | ಹುಬ್ಬಳ್ಳಿ-ಧಾರವಾಡ | 42 | 9 | 4 | 11 | 2 | - | 1 | - | - | 1 |
| 5. | ಕೊಪ್ಪಳ | 9 | 3 | 27 | 12 | - | 2 | - | - | - | 2 |
| 6. | ತುಮಕೂರು | 39 | 4 | 30 | 2 | - | 5 | 1 | - | - | 2 |
| 7. | ಮಂಡ್ಯ | 16 | 2 | 10 | 27 | - | - | - | - | - | - |
| 8. | ಕೊಡಗು | - | - | 6 | - | - | - | - | - | - | - |
| [illegible] | ಕೋಲಾರ | 11 | 15 | 40 | 1 | - | - | - | - | - | 2 |
| 10. | ಮಂಗಳೂರು | 9 | - | - | 10 | - | - | - | - | - | 3 |
| 11. | ಉತ್ತರ ಕನ್ನಡ | 8 | 12 | 27 | 5 | - | 5 | - | - | - | 7 |
| 12. | ಬೆಳಗಾಂ | 4 | 2 | 12 | 5 | - | - | - | - | - | - |
| 13. | ಉಡುಪಿ | 3 | 3 | 6 | - | - | - | - | - | - | - |
| 14. | ಹಾಸನ | 28 | - | 29 | 16 | - | 16 | - | - | - | - |
| 15. | ಮೈಸೂರು | 16 | 6 | 26 | 33 | 2 | - | 1 | - | 1 | 5 |
| 16. | ಶಿವಮೊಗ್ಗ | 23 | 18 | 34 | 15 | - | 25 | - | - | - | 4 |
| 17. | ಚಿತ್ರದುರ್ಗ | 5 | 1 | 21 | - | - | - | - | - | - | - |
| 18. | ದಾವಣಗೆರೆ | 19 | 9 | 3 | 13 | - | 5 | 1 | - | - | 3 |
| 19. | ಚಿಕ್ಕಮಗಳೂರು | 24 | - | 15 | 8 | - | 1 | - | - | - | - |
| 20. | ಗುಲ್ಬರ್ಗಾ | 10 | 18 | 57 | - | - | - | - | - | - | - |
| 21. | ಬೀದರ್ | - | - | 52 | 17 | - | - | - | - | - | - |
| 22. | ಬಿಜಾಪುರ | 13 | 41 | 56 | 9 | - | 1 | - | - | - | 4 |
| 23. | ಬಾಗಲಕೋಟೆ | 5 | 6 | 25 | 2 | - | - | - | - | - | - |
| 24. | ಚಾಮರಾಜನಗರ | 26 | 4 | 24 | - | - | - | - | - | - | - |
| 25. | ಬಳ್ಳಾರಿ | 22 | 34 | 54 | 34 | - | 2 | 1 | - | 1 | - |
| 26. | ಗದಗ | 12 | 3 | 8 | 3 | 1 | - | - | - | - | - |
| [illegible] | ಬೆಂಗಳೂರು ನಗರ | 144 | 48 | - | - | 3 | - | 5 | 73 | 68 | 21 |
| | ಒಟ್ಟು | 576 | 271 | 613 | 239 | 9 | 65 | 10 | 73 | 70 | 56 =1977 |

*ಮಾಹಿತಿ ಮೂಲ : ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಪತ್ರ*

**ಖಾಸಗಿಯವರ ಭೂಮಿಯಲ್ಲಿರುವ 576 ಹಾಗೂ ರೈಲ್ವೆ ಹಳಿ ಪಕ್ಕದಲ್ಲಿರುವ 9 ಸ್ಲಂಗಳು ಅತಂತ್ರ ಸ್ಥಿತಿಯಲ್ಲಿವೆ. ಭೂ ಸ್ವಾಧೀನ ಮಾಡಿಕೊಳ್ಳಲು ಕಾನೂನಿನ ಪ್ರಕಾರ ಸಾಧ್ಯವಿದ್ದರೂ ಇಲಾಖಾ ಅಧಿಕಾರಿಗಳು ಹಾಗೂ ಸರ್ಕಾರ ಗಂಭೀರವಾಗಿ ಪರಿಗಣಿಸದೇ ಇರುವುದು ಗೋಚರವಾಗುತ್ತದೆ. ಈ ಎಲ್ಲ ವಿಷಯಗಳ ಬಗ್ಗೆ ಸಾಮೂಹಿಕ ಹಾಗೂ ಜನಪರ ಸಂಘಟನೆಗಳು ಸ್ಲಂ ಜನತೆಗೆ ಅರಿವು ಮೂಡಿಸುವ ಅವಶ್ಯಕತೆ ಇದೆ. ಅಲ್ಲದೆ, ಈ ನಿಟ್ಟಿನಲ್ಲಿ ಸ್ಪಷ್ಟ ನಿಲುವು ಮತ್ತು ನಿರ್ಧಾರ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ.**

ಖಾ - ಖಾಸಗಿ　ಟಿಎಂಸಿ - ಪುರಸಭೆ　ಸಿಎಂಸಿ - ನಗರಸಭೆ　ಸಿಡಿಎ - ನಗರ ಅಭಿವೃದ್ಧಿ ಪ್ರಾಧಿಕಾರಗಳು
ಕೆಎಸ್‌ಸಿಬಿ - ಕೊಳಚೆ ನಿರ್ಮೂಲನಾ ಮಂಡಳಿ　ಬಿಸಿಸಿ - ಬೆಂಗಳೂರು ನಗರ ಪಾಲಿಕೆ　ಜಿಪಿ - ಗ್ರಾಮಪಂಚಾಯಿತಿ

## ಕೊಳಗೇರಿಗಳ ವರ್ಗೀಕರಣ - ಕಾನೂನು ರೀತಿ ಸರಕಾರ ಕೈಗೊಳ್ಳಬೇಕಾದ ಕ್ರಮ

| ಕೊಳಗೇರಿ ವರ್ಗೀಕರಣ | ಸರಕಾರ ಕೈಗೊಳ್ಳಬೇಕಾದ ಕ್ರಮಗಳು |
|---|---|
| 1. ದೊಡ್ಡ ಚರಂಡಿಗಳ ಇಕ್ಕೆಲಗಳಲ್ಲಿರುವ ಕೊಳಗೇರಿಗಳು | ಸ್ಲಂ ಕಾಯ್ದೆ ಕಲಂ 3ರ ಪ್ರಕಾರ ಡಿಕ್ಲೇರ್ ಮಾಡುವುದು. ಮೂಲಭೂತ ಸೌಲಭ್ಯ ಒದಗಿಸುವುದು. ವಸತಿ ಕಾರ್ಯಕ್ರಮ ಕೈಗೊಳ್ಳುವುದು |
| 2. ಸ್ಮಶಾನಗಳ ಅಂಚಿನ ಸ್ಲಂಗಳು | ಡಿಕ್ಲೇರ್ ಮಾಡಿ ವಸತಿ ಕಾರ್ಯಕ್ರಮ ಕೈಗೊಳ್ಳುವುದು |
| 3. ಬೆಟ್ಟಗುಡ್ಡಗಳ ಕೊಳಚೆ ಪ್ರದೇಶಗಳು | ಡಿಕ್ಲೇರ್ ಮಾಡಿ ವಸತಿ ಕಾರ್ಯಕ್ರಮ ಕೈಗೊಳ್ಳುವುದು |
| 4. ಕೆರೆಯ ಅಂಗಳದ ಪ್ರದೇಶಗಳು | ಡಿಕ್ಲೇರ್ ಮಾಡುವುದು. ಬಹಳ ಹಳ್ಳ/ತೆಗ್ಗು ಪ್ರದೇಶಗಳಾಗಿದ್ದರೆ ಪುನರ್ವಸತಿ ವ್ಯವಸ್ಥೆ ಮಾಡುವುದು. |
| 5. ಅಪಾರ್ಟ್‌ಮೆಂಟ್‌ಗಳ ಸುತ್ತಲಿನ ಕೊಳಗೇರಿಗಳು | ಡಿಕ್ಲೇರ್ ಮಾಡುವುದು. ಪುನರ್ ಅಭಿವೃದ್ಧಿ ಮತ್ತು ವಸತಿ ಯೋಜನೆ ರೂಪಿಸುವುದು. |
| 6. ನಗರಸಭೆ/ನಗರಪಾಲಿಕೆಗಳ ಕಸದ ಗುಂಡಿಗಳ ಆಜುಬಾಜಿನ ಪ್ರದೇಶಗಳು | ಡಿಕ್ಲೇರ್ ಮಾಡುವುದು. ಅದೇ ಸ್ಥಳದಲ್ಲಿ ವಸತಿ ಯೋಜನೆ ಹಮ್ಮಿಕೊಳ್ಳುವುದು. |
| 7. ಪ್ರತಿಷ್ಠಿತ ಮಾರುಕಟ್ಟೆಗಳ ಸಮೀಪದ ಕೊಳಗೇರಿಗಳು | ಡಿಕ್ಲೇರ್ ಮಾಡುವುದು. ಬಹುಮಹಡಿ ವಸತಿ ಯೋಜನೆ ಹಮ್ಮಿಕೊಳ್ಳುವುದು. |
| 8. ರೈಲ್ವೆ ಹಳಿಗಳ/ಪ್ರದೇಶದ ಕೊಳಗೇರಿಗಳು | ಡಿಕ್ಲೇರ್ ಮಾಡುವುದು. ಪರ್ಯಾಯ ಪುನರ್ವಸತಿ ಕೆಲಸ ಕೈಗೊಳ್ಳುವುದು. |
| 9. ಹೈಟೆನ್‌ಷನ್ ವಯರ್ ಕೆಳಗಿನ ಪ್ರದೇಶಗಳು | ಡಿಕ್ಲೇರ್ ಮಾಡುವುದು. ಪರ್ಯಾಯ ಪುನರ್ವಸತಿ ಕೆಲಸ ಕೈಗೊಳ್ಳುವುದು. |
| 10. ಮಿಲಿಟರಿ ಭೂ ಒಡೆತನದ ಕೊಳಚೆ ಪ್ರದೇಶಗಳು | ಡಿಕ್ಲೇರ್ ಮಾಡಿ, ಭೂ ಸ್ವಾಧೀನ ಮಾಡಿಕೊಂಡು ವಸತಿ ಯೋಜನೆ ಹಮ್ಮಿಕೊಳ್ಳುವುದು. |
| 11. ಮುಜರಾಯಿ, ಮಸೀದಿ, ಚರ್ಚ್ ಜಾಗಗಳಲ್ಲಿರುವ ಸ್ಥಳಗಳು | ಡಿಕ್ಲೇರ್ ಮಾಡಿ, ಭೂ ಸ್ವಾಧೀನ ಮಾಡಿಕೊಂಡು ವಸತಿ ಯೋಜನೆ ಹಮ್ಮಿಕೊಳ್ಳುವುದು. ಅಥವಾ ಪರ್ಯಾಯ ವ್ಯವಸ್ಥೆ ಮಾಡುವುದು |

**ಮೇಲೆ ಸೂಚಿಸಿರುವ ವರ್ಗಗಳ ಪೈಕಿ ರೈಲ್ವೆ ಹಳಿಗಳ ಆಜುಬಾಜು ಮಿಲಿಟರಿ ಭೂ ಒಡೆತನಕ್ಕೆ ಸೇರಿದ ಕೊಳೆಗೇರಿ ನಿವಾಸಿಗಳದ್ದು ಅಸ್ಥಿರ ಬದುಕು. ಅಧಿಕಾರಿಗಳಿಂದಲೇ ಜನರಿಗೆ ತೊಂದರೆ ಮತ್ತು ಕಿರುಕುಳಗಳೇ ಹೆಚ್ಚು. ಮುಜರಾಯಿ, ಚರ್ಚು, ಮಸೀದಿ ಪ್ರದೇಶಗಳಲ್ಲಿರುವ ಜನರ ಬದುಕು ಸಹ ಗಂಡಾಂತರದಿಂದ ಹೊರತಾಗಿಲ್ಲ. ಜನರ ನೆಲೆ ಉಳಿಸಲು ಪರ್ಯಾಯ ವ್ಯವಸ್ಥೆ ಕಲ್ಪಿಸಲು ಪ್ರತ್ಯೇಕ ತಂತ್ರ ರೂಪಿಸುವ ಜವಾಬ್ದಾರಿ ಎಲ್ಲಾ ಸಾಮೂಹಿಕ ಹಾಗೂ ಜನಪರ ಸಂಘಟನೆಗಳ ಮೇಲೆ ಅವಲಂಬಿತವಾಗಿದೆ.**



## ಭೂ ಒಡೆತನ ಹಾಗೂ ಸರಕಾರ ಕೈಗೊಳ್ಳಬೇಕಾದ ಕ್ರಮಗಳು

| ಭೂ ಒಡೆತನ | ಸರಕಾರ ಕೈಗೊಳ್ಳಬೇಕಾದ ಕ್ರಮಗಳು |
|---|---|
| 1. ಖಾಸಗಿಯವರ ಜಮೀನು | ಕಲಂ 17ರ ಪ್ರಕಾರ ಡಿಕ್ಲೇರ್ ಮಾಡಿ ಭೂ ಸ್ವಾಧೀನ ಮಾಡಿಕೊಳ್ಳುವುದು. ಪರಿಹಾರ ಕೊಡುವುದು. |
| 2 ಅರಣ್ಯ ಇಲಾಖೆ ಜಮೀನು | ಭೂ ಸ್ವಾಧೀನ ಮಾಡಿಕೊಳ್ಳುವುದು (ಕಲಂ 26 ಎ ಪ್ರಕಾರ) |
| 3. ರೈಲ್ವೇ ಜಮೀನು | ಸದರಿ ಸ್ಲಂಗೆ ಸಮೀಪವಿರುವ ಸರಕಾರಿ ಜಮೀನನ್ನು ಪುನರ್ವಸತಿಗಾಗಿ ಸ್ವಾಧೀನ ಮಾಡಿಕೊಳ್ಳುವುದು ಅಥವಾ ಮೀಸಲಿಡುವುದು. ಅಲ್ಲದೆ ವಸತಿ ಯೋಜನೆಗೆ ರೈಲ್ವೇ ಇಲಾಖೆಯಿಂದ ಹಣ ಪಡೆಯುವುದು. |
| 4. ಮಿಲಿಟರಿ ಜಮೀನು | ಮಿಲಿಟರಿಯಿಂದ ರಾಜ್ಯ ಸರಕಾರ ಸ್ಲಂ ಇರುವಷ್ಟು ಜಮೀನನ್ನು ಹಿಂತೆಗೆದುಕೊಂಡು ಅಲ್ಲಿನ ಜನರ ವಸತಿ ಯೋಜನೆಗೆ ಕೊಡುವುದು. |
| 5. ಮುಜರಾಯಿ/ವಕ್ಫ್ ಬೋರ್ಡ್ /ಚರ್ಚ್ ಜಮೀನು | ಸ್ಲಂ ಇರುವ ಅಳತೆಯ ಭೂಮಿಯನ್ನು ರಾಜ್ಯ ಸರಕಾರ ಇವರಿಂದ ಸ್ವಾಧೀನಪಡಿಸಿಕೊಂಡು ಅಲ್ಲಿ ವಾಸಿಸುವ ಸ್ಲಂ ಜನರಿಗೆ ವಸತಿ ನಿರ್ಮಿಸುವುದು. |
| 6. ಫ್ಯಾಕ್ಟರಿ ಜಮೀನು | ಭೂ ಸ್ವಾಧಿನಪಡಿಸಿಕೊಳ್ಳುವುದು. ವಸತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| 7. ನಗರಪಾಲಿಕೆ/ನಗರಸಭೆ ಜಮೀನು | ಸ್ಲಂ ಇರುವ ಪ್ರದೇಶವನ್ನು ವಸತಿ ಕಾರ್ಯಕ್ರಮಕ್ಕೆ ಉಪಯೋಗಿಸಿ ಕೊಳ್ಳುವಂತೆ ಆಜ್ಞೆ ಹೊರಡಿಸಿ ವಸತಿ ಯೋಜನೆ ಹಮ್ಮಿಕೊಳ್ಳುವುದು. |
| 8. ಸರಕಾರಿ ವಿವಿಧ ಇಲಾಖೆಗಳ ಜಮೀನು | ಸ್ಲಂ ಇರುವ ಪ್ರದೇಶವನ್ನು ವಸತಿ ಕಾರ್ಯಕ್ರಮಕ್ಕೆ ಉಪಯೋಗಿಸಿ ಕೊಳ್ಳುವಂತೆ ಆಜ್ಞೆ ಹೊರಡಿಸಿ ವಸತಿ ಯೋಜನೆ ಹಮ್ಮಿಕೊಳ್ಳುವುದು. |

ಶೇಕಡಾ 60 ರಷ್ಟು ಭೂ ಒಡೆತನ ಸರಕಾರದ ವಿವಿಧ ಇಲಾಖೆಗಳಲ್ಲಿದು STEM ಸಂಸ್ಥೆಯ ಸಮೀಕ್ಷೆ ವರದಿ ಮಾಡಿದೆ. ಸದರಿ ಸ್ಲಂಗಳ ಭೂ ಒಡೆತನವನ್ನು ಸ್ಲಂ ಜನರಿಗೆ ಕೊಡುವ ನಿರ್ಧಾರ ರಾಜ್ಯ ಮಟ್ಟದಲ್ಲಾದರೆ ಶೇ. 60ರಷ್ಟು ಸ್ಲಂ ಜನರ ಸಮಸ್ಯೆ ಬಗೆಹರಿಸಿದಂತಾಗುವುದು. ಇಲ್ಲಿ ರಾಜಕೀಯ ನಿಲುವು ತೆಗೆದುಕೊಳ್ಳುವ ಅಗತ್ಯವಿದೆ.

**ಸ್ಲಂ ಕಾಯ್ದೆ ಅನುಷ್ಠಾನಕ್ಕೆ ಬಂದು 24 ವರ್ಷ ಕಳೆದರೂ ಕರ್ನಾಟಕದಲ್ಲಿ ಕೊಳಚೆ ನಿರ್ಮೂಲನಾ ಕಾಯ್ದೆಯ ಕಲಂ 17ರ ಪ್ರಕಾರ ಡಿಕ್ಲೇರ್ ಆಗಿರುವ ಸ್ಲಂ ಗಳ ಸಂಖ್ಯೆ ಕೇವಲ 29. ತನಗೆ ದತ್ತವಾಗಿರುವ ಅಧಿಕಾರದ ಚೌಕಟ್ಟಿನಲ್ಲಿ ಜನಪರ ಕೆಲಸ ಮಾಡುವ ಸಾಧ್ಯತೆ ಇದ್ದರೂ ಕೆಲಸಗಳಾಗದೇ ಇರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಕಾಯ್ದೆಯನ್ನು ಸ್ಲಂ ಜನರ ಪರ ಉಪಯೋಗಿಸಬೇಕಾದ ಅಧಿಕಾರಿಗಳು ರಾಜಕಾರಣಿಗಳ ಕುತಂತ್ರಕ್ಕೆ ಬಲಿಯಾಗಿ ಸ್ಲಂ ಜನರ ಭೂಮಿಯನ್ನು ಪರಭಾರೆ ಮಾಡುವ ಕಾಯಕದಲ್ಲಿ ತೊಡಗಿದ್ದಾರೆ. ಮಂಡಳಿಯ ಆಯಕಟ್ಟಿನ ಜಾಗದಲ್ಲಿರುವ ಅಧಿಕಾರಿಗಳು ಹಣ ಮತ್ತು ಸಾಮಗ್ರಿಗಳನ್ನು ಲೂಟಿ ಮಾಡುತ್ತಿದ್ದಾರೆ. ಸಾಮೂಹಿಕ ಮತ್ತು ಜನಪರ ಸಂಘಟನೆಗಳ ಗಮನ ಈಕಡೆ ಹರಿಯಬೇಕಿದೆ.**

## ಬೆಂಗಳೂರು ನಗರ ಕೊಳಗೇರಿಗಳ ಪ್ರಮುಖ ಅಂಕಿ ಅಂಶಗಳು

### I. ಕೊಳಚೆ ನಿರ್ಮೂಲನಾ ಮಂಡಳಿ ಪಟ್ಟಿ

| 1989 ಸೆಪ್ಟಂಬರ್ - | | ಬೆಂಗಳೂರಿನ ಸ್ಲಂಗಳ ಸಂಖ್ಯೆ |
|---|---|---|
| ಕೊಳಚೆ ನಿರ್ಮೂಲನಾ ಮಂಡಳಿ ವ್ಯಾಪ್ತಿ | - | 165 |
| ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿ | - | 64 |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ | - | 64 |
| ರೈಲ್ವೇ/ಮುಜರಾಯಿ ಇಲಾಖೆ ವ್ಯಾಪ್ತಿ | - | 108 |
| | ಒಟ್ಟು | 401 |

*ಮೂಲ: ಹೆಚ್.ಗೋವಿಂದಪ್ಪ, ಕಾರ್ಯದರ್ಶಿ. ಕೊಳಚೆ ನಿರ್ಮೂಲನಾ ಮಂಡಳಿ*

*ಪ್ರಕಾಶಕರು : ಇಂಡಿಯನ್ ಸೊಸೈಟಿ ಆಫ್ ಹೆಲ್ತ್ ಅಡ್ಮಿನಿಸ್ಟ್ರೇಟರ್ಸ್*

### II. ಕರ್ನಾಟಕ ಕೊಳಗೇರಿಗಳ ಸಮಗ್ರ ಸಮೀಕ್ಷಾ ವರದಿಯಂತೆ :

| | |
|---|---|
| ಸಮೀಕ್ಷೆ ನಡೆಸಿದ ಸ್ಲಂಗಳ ಸಂಖ್ಯೆ | 343 |
| ಡಿಕ್ಲೇರ್ ಆದ ಸ್ಲಂಗಳ ಸಂಖ್ಯೆ | 201 |
| ಡಿಕ್ಲೇರ್ ಆಗಬೇಕಾದ ಸ್ಲಂಗಳ ಸಂಖ್ಯೆ | 142 |
| ಒಟ್ಟು ಭೂ ವಿಸ್ತೀರ್ಣ (ಎಕರಗಳಲ್ಲಿ) | 610.95 |

ಕ್ಷೇತ್ರಾವಾರು ಅಂಕಿ ಅಂಶಗಳಿಗಾಗಿ ಮುಂದಿನ ಪುಟ ನೋಡಿ

*ಮೂಲ : ಡಾ. ಜೋಗನ್ ಶಂಕರ್*

*ಬೆಂಗಳೂರಿನ ಕೊಳಚೆ ನಿರ್ಮೂಲನಾ ಮಂಡಳಿಗೆ ಸಲ್ಲಿಸಲಾದ ವರದಿ.*

### III. ಬೆಂಗಳೂರು ನಗರಪಾಲಿಕೆಗೆ STEM ಸಂಸ್ಥೆ ಮಾಡಿದ ಅಧ್ಯಯನ ವರದಿ - 1992

| | |
|---|---|
| ಬೆಂಗಳೂರು ಮಹಾ ನಗರಪಾಲಿಕೆ ಪಟ್ಟಿ ಮಾಡಿದ ಒಟ್ಟು ಸ್ಲಂಗಳ ಸಂಖ್ಯೆ (20 ಗುಡಿಸಲುಗಳಿರುವ ಸ್ಲಂಗಳನ್ನು ಹೊರತುಪಡಿಸಿ) | 545 |
| ಅಧ್ಯಯನಕ್ಕೆ ಆಯ್ಕೆಯಾದ ಸ್ಲಂಗಳ ಸಂಖ್ಯೆ | 345 |

*ಮೂಲ ಬೆಂಗಳೂರು ನಗರ ಪಾಲಿಕೆಗೆ ಸಲ್ಲಿಸಲಾದ STEM ಸಂಸ್ಥೆ ಮಾಡಿದ ಅಧ್ಯಯನದ ವರದಿ*

### IV. ಬೆಂಗಳೂರು ನಗರ ಸಾಕ್ಷರತಾ ಸಮಿತಿಯ ಸಮೀಕ್ಷೆ ಪ್ರಕಾರ ಒಟ್ಟು ಸ್ಲಂಗಳು 770

ಈ ಮೇಲಿನ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ನಿಖರವಾಗಿ ಸ್ಲಂಗಳು ಎಷ್ಟು ಎಂದು 1998 ರಲ್ಲಿ ಮಾತ್ರ ಪ್ರಕಟಗೊಂಡಿದೆ.



## ಕೊಳಗೇರಿಗಳ ಸಮಗ್ರ ಸಮೀಕ್ಷಾ ವರದಿಯಲ್ಲಿ ಬೆಂಗಳೂರು ಸ್ಲಂಗಳ ಅಂಕಿ ಅಂಶಗಳು

| ಕ್ರ.ಸಂ. | ವಿಧಾನಸಭಾ ಕ್ಷೇತ್ರ ಸ್ಲಂಗಳ ಸಂಖ್ಯೆ | ಒಟ್ಟು ಸ್ಲಂಗಳ ಸಂಖ್ಯೆ | ಡಿಕ್ಲರೇಶನ್ ಆದ ಸ್ಲಂಗಳ ಸಂಖ್ಯೆ | ಡಿಕ್ಲೇರ್ ಆಗಬೇಕಾದ (ಎಕರಗಳಲ್ಲಿ) | ಸ್ಲಂಗಳ ಭೂಮಿತಿ |
|---|---|---|---|---|---|
| 1. | ಭಾರತಿನಗರ | 23 | 17 | 06 | 63.45 |
| 2. | ರಾಜಾಜಿನಗರ | 32 | 13 | 19 | 64.55 |
| 3. | ಮಲ್ಲೇಶ್ವರ | 40 | 26 | 14 | 57.85 |
| 4. | ಗಾಂಧಿನಗರ | 17 | 07 | 10 | 21.50 |
| | ಚಿಕ್ಕಪೇಟೆ | 10 | 07 | 03 | 17.75 |
| 6. | ಶಾಂತಿನಗರ | 20 | 08 | 12 | 28.25 |
| 7. | ಉತ್ತರಹಳ್ಳಿ | 31 | 20 | 11 | 84.00 |
| 8. | ವರ್ತೂರು | 29 | 15 | 14 | 51.20 |
| 9. | ಬಿನ್ನಿಪೇಟೆ | 18 | 11 | 07 | 22.50 |
| 10. | ಚಾಮರಾಜಪೇಟೆ | 22 | 19 | 03 | 34.25 |
| 11. | ಜಯನಗರ | 46 | 23 | 23 | 82.00 |
| 12. | ಯಲಹಂಕ | 23 | 13 | 10 | 47.00 |
| 13. | ಜಯಮಹಲ್ | 18 | 12 | 06 | 15.15 |
| 14. | ಶಿವಾಜಿನಗರ | 05 | 03 | 02 | 06.50 |
| 15. | ಬಸವನಗುಡಿ | 10 | 08 | 02 | 15.00 |
| | ಒಟ್ಟು | 343 | 202 | 142 | 610.95 |

*ಮೂಲ. ಡಾ. ಜೋಗನ್ ಶಂಕರ್ ಸಮೀಕ್ಷಾ ವರದಿ ಆಧಾರ*

**ಬೆಂಗಳೂರು ನಗರದ ಎಲ್ಲಾ ಸ್ಲಂ ಗಳನ್ನು ಈ ಸಮೀಕ್ಷೆಯ ವ್ಯಾಪ್ತಿಯಲ್ಲಿ ತರಲಾಗಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿ ತಯಾರಿಸಿ ಕೊಟ್ಟ ಪಟ್ಟಿಯಲ್ಲಿರುವ ಸ್ಲಂಗಳಿಂದ ಮಾತ್ರ ಮಾಹಿತಿ ಸಂಗ್ರಹಿಸಲಾಗಿದೆ. ಆದ್ದರಿಂದ ಮೇಲಿನ ಅಂಕಿ-ಅಂಶಗಳು ಕೇವಲ 343 ಸ್ಲಂ ಗಳಿಗೆ ಮಾತ್ರ ಸೀಮಿತವಾಗಿದೆ. ಉಳಿದ 427 ಸ್ಲಂ ಗಳ ಮಾಹಿತಿ ಸದರಿ ಸಮೀಕ್ಷೆಯ ವ್ಯಾಪ್ತಿಗೆ ಬಂದಿರುವುದಿಲ್ಲ. ಉತ್ತರಹಳ್ಳಿ ಮತ್ತು ಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿರುವ ಸ್ಲಂ ಗಳೇ ಸುಮಾರು 164ಕ್ಕೂ ಹೆಚ್ಚಿವೆ.**

## ಸ್ಲಂಗಳು ಮತ್ತು ಅವುಗಳ ಅಸ್ತಿತ್ವದ ಅವಧಿ

40 ವರ್ಷಗಳಿಗೂ ಮೇಲ್ಪಟ್ಟು ಸ್ಲಂಗಳು
20-40 ವರ್ಷಗಳ ಸ್ಲಂಗಳು
10-20 ವರ್ಷಗಳ ಸ್ಲಂಗಳು
10 ವರ್ಷಗಳ ಒಳಗಿನ ಸ್ಲಂಗಳು

ಅಂದಾಜು ಶೇ. 50 ಕ್ಕೂ ಹೆಚ್ಚು 40 ವರ್ಷಗಳ ಮೇಲ್ಪಟ್ಟ ಸ್ಲಂಗಳು. ಇಂತಹ ಕೆಲವು ಸ್ಲಂಗಳೂ ಸಹ ಕಾಯ್ದೆ ವ್ಯಾಪ್ತಿಗೆ ಬಾರದೇ ಇರುವುದು ಆಶ್ಚರ್ಯ

## ಸ್ಲಂ ಜನರ ಬದುಕು - ಸಮಸ್ಯೆಗಳ ಸ್ವರೂಪ

(ಅಂಕಿ ಅಂಶಗಳು : STEM ಸಮೀಕ್ಷಾ ವರದಿ - 92)

- ಶೇ. 90 ರಷ್ಟು ಕುಟುಂಬಗಳು ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆಯ ಮೇಲೆ ಅವಲಂಬಿತರಾದರೆ (ಕಾರ್ಪೊರೇಶನ್ ನೀರು ಅಥವಾ ಬೋರ್‌ವೆಲ್) ಶೇ. 5 ರಷ್ಟು ಕುಟುಂಬಗಳಿಗೆ ಈ ವ್ಯವಸ್ಥೆಯೂ ಇಲ್ಲ.
- ಶೇ. 55.5 ರಷ್ಟು ಜನಕ್ಕೆ ಸಾಮೂಹಿಕ ಶೌಚಾಲಯ ಲಭ್ಯವಿದ್ದರೆ, ಶೇ. 20ರಷ್ಟು ಜನಕ್ಕೆ ಬಯಲು ಪ್ರದೇಶವೇ ಗತಿ. ಮಹಿಳೆಯರ ಸ್ಥಿತಿ ಚಿಂತಾಜನಕ.
- ಶೇ. 18.6 ರಷ್ಟು (7ರಿಂದ 14 ವರ್ಷದೊಳಗಿನ ಬಾಲಕ-ಬಾಲಕಿಯರು) ಬಾಲ ಕಾರ್ಮಿಕರು.
- ಶೇ. 65 ರಷ್ಟು ಮಕ್ಕಳು (11 ರಿಂದ 15 ವರ್ಷದೊಳಗಿನ) ಶಾಲೆ ಬಿಡುವರು (School dropouts).
- ಶೇ. 58 ರಷ್ಟು ಮಕ್ಕಳು ಬಡತನದಿಂದಾಗಿ ಶಿಕ್ಷಣ ಮುಂದುವರಿಸುತ್ತಿಲ್ಲ.
- ಶೇ. 51 ರಷ್ಟು ಮಹಿಳೆಯರು (15 ರಿಂದ 40 ವರ್ಷದೊಳಗಿನ) ಅನಕ್ಷರಸ್ಥರು.
- ಶೇ. 74 ರಷ್ಟು ಜನ ವಾಸಕ್ಕೆ ಯೋಗ್ಯವಲ್ಲದ ಗುಡಿಸಲುಗಳಲ್ಲಿ ವಾಸ.
- ಶೇ. 60 ರಷ್ಟು ಸ್ಲಂಗಳು ಸರಕಾರಿ ಒಡೆತನದಲ್ಲಿರುವ ಭೂಮಿಗಳಲ್ಲಿವೆ.
- ಶೇ. 40 ರಷ್ಟು ಸ್ಲಂಗಳು ಖಾಸಗಿ ಒಡೆತನದಲ್ಲಿರುವ ಭೂಮಿಯಾಗಿದೆ.
- ಶೇ. 45 ರಷ್ಟು ಸ್ಲಂಗಳಲ್ಲಿ ಯಾವುದೇ ಸಂಘಗಳಿಲ್ಲ.
- ಸ್ಲಂಗಳಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ 1,61,102. ಒಟ್ಟು ಜನಸಂಖ್ಯೆ 8.5 ಲಕ್ಷಗಳು (343 ಸ್ಲಂಗಳು). 1995ರ ಅಂದಾಜಿನ ಪ್ರಕಾರ 12.50 ಲಕ್ಷಗಳು.
- ಶೇ. 34 ರಷ್ಟು ತಮಿಳರು. ಶೇ. 33 ರಷ್ಟು ಕನ್ನಡಿಗರು ಹಾಗೂ ಶೇ. 17ರಷ್ಟು ಉರ್ದು. ಶೇ. 14ರಷ್ಟು ತೆಲುಗು ಮಾತನಾಡುವರು.



- ಶೇ. 40 ರಷ್ಟು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರಾದರೆ, ಶೇ. 35ರಷ್ಟು ಹಿಂದುಳಿದ ಕೋಮಿಗೂ, ಶೇ. 17 ರಷ್ಟು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದಾರೆ.
- ಶೇ. 55 ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದಾರೆ.
- ಶೇ. 21 ರಷ್ಟು ಜನಸಂಖ್ಯೆ ಕನಿಷ್ಠ ಆರೋಗ್ಯ ಸೇವೆಯಿಂದ ವಂಚಿತರಾಗಿದ್ದಾರೆ.
- ಶೇ. 5.2 ರಷ್ಟು ಅಂಗವಿಕಲರು ಇದರಲ್ಲಿ ಶೇ. 40 ಭಾಗ ಪೋಲೀಯೋ ಪೀಡಿತರಾದವರು.

## ಕೊಳಗೇರಿಗಳ ಜ್ವಲಂತ ಸಮಸ್ಯೆಗಳು

- ಬದುಕಿಗೆ ಆಘಾತಕಾರಿಯಾದ ಮೂಲಭೂತ ಸಮಸ್ಯೆಗಳು

1. ಬಹುಸಂಖ್ಯೆಯ ಸ್ಲಂ ಗಳು ಕಾನೂನಿನ ಆಡಿಯಲ್ಲಿ ಬಾರದಿರುವುದು ಹಾಗೂ ಅವರು ವಾಸಿಸುವ ನೆಲದ ಹಕ್ಕುಪತ್ರ, ಲಭ್ಯವಿಲ್ಲದಿರುವುದು.
2. ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಆರಕ್ಷಕರಿಂದ ಶೋಷಣೆ ಮತ್ತು ದೌರ್ಜನ್ಯ, ಕೆಲವೊಮ್ಮೆ ಅತಿರೇಕಗಳೂ ಆಗುತ್ತಿವೆ.
3. ಲೇವಾದೇವಿ ಮಾಡುವ ಮಾರ್ವಾಡಿಗಳಿಂದ ಬಡ್ಡಿ ರೂಪದಲ್ಲಿ ಹಣದ ಸುಲಿಗೆ.
4. ಸ್ಲಂ ಜನರಿಗೆ ದಕ್ಕಬೇಕಾದ ಸರಕಾರಿ ಸೌಲಭ್ಯಗಳ ದುರ್ಬಳಕೆ, ಲಂಚ, ಭ್ರಷ್ಟಾಚಾರ.
5. ಸ್ಲಂ ಒಳಗೇ ಸಾರಾಯಿ ಮಾರಾಟ, ಕಲಹ ಹಾಗೂ ದೌರ್ಜನ್ಯ.

- ದಿನನಿತ್ಯದ ಸೌಲಭ್ಯಗಳ ಕೊರತೆ, ದಯನೀಯ ಪರಿಸ್ಥಿತಿಯಲ್ಲಿ ಜೀವನ

1. ಕುಡಿಯುವ ನೀರಿಗಾಗಿ ಪರದಾಟ, ಒಮ್ಮೊಮ್ಮೆ ಹೊಡೆದಾಟ.
2. ದೇಹಬಾಧೆ ತೀರಿಸಿಕೊಳ್ಳಲು ಸರಿಯಾದ ಶೌಚಾಲಯ ವ್ಯವಸ್ಥೆಯಿಲ್ಲ. ಹೆಚ್ಚಿನ ಸ್ಲಂಗಳಲ್ಲಿ ಮಹಿಳೆಯರ ಸ್ಥಿತಿ ಹೇಳತೀರದು.
3. ರಸ್ತೆ-ಚರಂಡಿಗಳಿಲ್ಲ, ಇದ್ದರೂ ಸ್ವಚ್ಛಗೊಳಿಸುವ ವ್ಯವಸ್ಥೆಯಿಲ್ಲ.
4. ಕಸದ ತೊಟ್ಟಿಗಳಿಲ್ಲ, ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಯಿಲ್ಲ.
5. ಅನೈರ್ಮಲ್ಯ ಪರಿಸರ ಹಾಗೂ ಆರೋಗ್ಯ ಸೇವೆಗಳ ಅಲಭ್ಯತೆ.
6. ಬೀದಿ ದೀಪಗಳಿಲ್ಲ, ಇದ್ದರೂ ಅವುಗಳಿಗೆ ಬಲ್ಬ್‌ಗಳ ವ್ಯವಸ್ಥೆಯಿಲ್ಲ.
7. ಬಹುತೇಕ ಸ್ಲಂಗಳಲ್ಲಿ ಪುಟ್ಟ ಮಕ್ಕಳಿಗೆ ಅಂಗನವಾಡಿಗಳಿಲ್ಲ, ಇದ್ದರೂ ಸೌಲಭ್ಯಗಳಿಲ್ಲ.
8. ನ್ಯಾಯಬೆಲೆ ಅಂಗಡಿ ಇದ್ದರೂ, ಆಹಾರ ಸಾಮಗ್ರಿಗಳು ಲಭ್ಯವಿಲ್ಲ. ಸೀಮೆಎಣ್ಣೆಗೆ ಕೊರತೆ
9. ಪ್ರವಾಹ ಮತ್ತು ಬೆಂಕಿ ಅನಾಹುತಕ್ಕೆ ತುತ್ತಾಗುವ ಸ್ಲಂಗಳೇ ಹೆಚ್ಚು. ಪರಿಹಾರದ ನೆಪದಲ್ಲಿ ಅಧಿಕಾರಿಗಳಿಂದ ಹಣ ಕಬಳಿಕೆ, ಮುಂತಾದವುಗಳು.

## ಸ್ಲಂ ಜನ ಮತ್ತು ಅವರಿಗಿರುವ ಕಾಯ್ದೆ

ಸ್ಲಂ ಜನರಿಗಾಗಿ ಕಾಯ್ದೆಯೊಂದಿದೆ
ಅದೇ ಕರ್ನಾಟಕ ಕೊಳಚೆ ಪ್ರದೇಶಗಳ ಉತ್ತಮೀಕರಣ ಮತ್ತು ನಿರ್ಮೂಲನ ಕಾಯ್ದೆ 1973
ರಾಷ್ಟ್ರಪತಿಗಳಿಂದ ಅಂಗೀಕಾರ ಪಡೆದದ್ದು 1974
ಇದಕ್ಕೆ ನಿಯಮಾವಳಿಯೊಂದಿದೆ
ಅದು ಕರ್ನಾಟಕ ಕೊಳಚೆ ಪ್ರದೇಶಗಳ ಉತ್ತಮೀಕರಣ ಮತ್ತು ನಿರ್ಮೂಲನಾ ನಿಯಮಾವಳಿ 1975
ಆಚರಣೆಗೆ ಬಂದದ್ದು 1975 ಆಗಸ್ಟ್ ತಿಂಗಳು

### ಕಾಯ್ದೆಯ ಮುಖ್ಯಾಂಶಗಳು

1. ಸ್ಲಂಗಳನ್ನು ಡಿಕ್ಲೇರ್ ಮಾಡುವುದು
2. ಸ್ಲಂಗಳು ಹುಟ್ಟದಂತೆ ಮತ್ತು ವ್ಯಾಪಿಸದಂತೆ ತಡೆಗಟ್ಟುವುದು
3. ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟುವುದು.
4. ಸ್ಲಂಗಳನ್ನು ಉತ್ತಮೀಕರಣಗೊಳಿಸುವುದು.
5. ಸ್ಲಂಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ನಿರ್ಮೂಲನ ಮಾಡುವುದು.
6. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು.
7. ಸ್ಲಂ ನಿವಾಸಿಗಳಿಗೆ ರಕ್ಷಣೆ ಕೊಡುವುದು.

### ಕಾಯ್ದೆ ಉದ್ದೇಶಗಳು

**ಸ್ಲಂ ಉತ್ತಮೀಕರಣ, ಅಭಿವೃದ್ಧಿ ಮತ್ತು ನಿರ್ಮೂಲನೆ**

- ಕುಡಿಯುವ ನೀರು
- ಶೌಚಾಲಯ ವ್ಯವಸ್ಥೆ
- ಚರಂಡಿ ವ್ಯವಸ್ಥೆ
- ಕಸದ ವಿಲೇವಾರಿ
- ರಸ್ತೆ ರಿಪೇರಿ
- ಸ್ನಾನ ಗೃಹ
- ವಿದ್ಯುದ್ದೀಪ
- ಭೂ ಸ್ವಾಧೀನ
- ವಸತಿ ನಿರ್ಮಾಣ
- ಪುನರ್ವಸತಿ

**ಈ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಆಯಾ ಸ್ಲಂಗಳು ಮೇಲ್ಕಂಡ ಕಾಯ್ದೆಯ ಪ್ರಕಾರ ಘೋಷಿತಗೊಂಡಿರಬೇಕು.**



## ಕಾಯ್ದೆ ಎಷ್ಟು ಜನಪರ

- ಕಾಯ್ದೆಯ ಮೂರನೇ ಒಂದು ಭಾಗದಷ್ಟು ಸೆಕ್ಷನ್‌ಗಳು ಮಾತ್ರ ಸ್ಲಂ ಜನರ ಪರವಾಗಿದೆ.
- ಸ್ಲಂ ಡಿಕ್ಲೇರ್ ಆದರೆ ಎಲ್ಲಾ ಸೌಲಭ್ಯಗಳು ದೊರೆಯುತ್ತದೆಂದು ನಂಬಲಾಗುವುದಿಲ್ಲ.
- ಸ್ಲಂ ಡಿಕ್ಲೇರ್ ಆದ ಕೂಡಲೇ ಸಂಬಂಧಿಸಿದ ಅಥಾರಿಟಿಗಳಿಂದ ನಿರ್ಮೂಲನೆ ಹೆಸರಿನಲ್ಲಿ ತೊಂದರೆಯಾಗುವ ಸಾಧ್ಯತೆಗಳೇ ಹೆಚ್ಚು. ಇದರ ನಿರ್ಧಾರ ಪ್ರಿಸ್‌ಕ್ರೈಬ್ಡ್ ಅಥಾರಿಟಿಗೆ ಬಿಟ್ಟಿದ್ದು.
- ಸ್ಲಂ ಜನ ಪ್ರಿಸ್‌ಕ್ರೈಬ್ಡ್ ಅಥಾರಿಟಿ ಗಮನಕ್ಕೆ ಸ್ಲಂ ಜನ ತರಬೇಕಾದ ಅಂಶಗಳ ಬಗ್ಗೆ ಅವಧಿ ನಿಗಧಿಪಡಿಸಲಾಗಿದೆ. ಆದರೆ, ಅವರಿಂದ ಆಗುವ ಕೆಲಸಕ್ಕೆ ಅವಧಿ ನಿಗದಿಯಾಗಿಲ್ಲ.
- ಜನಪರವಾಗಿರುವ ಕೆಲವು ಸೆಕ್ಷನ್‌ಗಳಿದ್ದಲ್ಲಿ ಕಠಿಣ ನಿಯಮಗಳಿಂದಾಗಿ ಅವು ತಮ್ಮ ತೀವ್ರತೆಯನ್ನು ಕಳೆದುಕೊಂಡು ತೊಂದರೆಯಾಗುವುದೇ ಹೆಚ್ಚು.

### 20 ವರ್ಷಗಳ ಸ್ಲಂ ಕಾಯ್ದೆ ಅನುಷ್ಠಾನದ ಪ್ರಗತಿ

- ರಾಜ್ಯದ ನಗರ/ಪಟ್ಟಣ ಪ್ರದೇಶಗಳ ಎಲ್ಲಾ ಸ್ಲಂಗಳು ಕಾಯ್ದೆಯಡಿ ಬಂದಿಲ್ಲ.
- ಅತ್ಯಂತ ಅಮಾನವೀಯ/ಸಂದಿಗ್ಧ ಪರಿಸ್ಥಿತಿಯಲ್ಲಿರುವ ರೈಲ್ವೆ, ಮಿಲಿಟರಿ ಪ್ರದೇಶಗಳಲ್ಲಿರುವ ಸ್ಲಂಗಳು ಕಾಯ್ದೆ ವ್ಯಾಪ್ತಿಯಲ್ಲಿ ತರಲಾಗಿಲ್ಲ.
- ಬಿಡಿಎ ಮತ್ತು ಬಿಸಿಸಿ ಸ್ಲಂಗಳು ಅವರವರ ವ್ಯಾಪ್ತಿಯಲ್ಲೇ ಉಳಿದುಬಿಟ್ಟಿರುವುದರಿಂದ ಕಾಯ್ದೆ ವ್ಯಾಪ್ತಿಗೆ ಬಂದಿಲ್ಲ.
- ವರ್ಷಗಳ ಅವಧಿಯಲ್ಲಿ ಡಿಕ್ಲೇರ್ ಆದ ಬೆಂಗಳೂರು ನಗರದ ಸ್ಲಂಗಳು ಮತ್ತು ಅವುಗಳ ಸಂಖ್ಯೆಯನ್ನು ಗಮನಿಸಿ, ಪ್ರಗತಿಯ ಪಥ ತಿಳಿಯಿರಿ.
- ಶೇ. 90 ರಷ್ಟು ಸ್ಲಂಗಳು ಕಾಯ್ದೆಯ 3ನೇ ಸೆಕ್ಷನ್ ಪ್ರಕಾರ ಮಾತ್ರ ಡಿಕ್ಲೇರ್ ಆಗಿರುವುದು. ಅದು ಮುಂದಕ್ಕೆ ಚಲಿಸಲಾಗುತ್ತಿಲ್ಲ. ಕಾರಣ ಬಲ್ಲವರೇ ಬಲ್ಲರು.

### ಸ್ಲಂ ಡಿಕ್ಲೇರ್ ಮಾಡಲು ಅನುಸರಿಸಬೇಕಾದ ನಿಯಮಗಳು

**ಒಂದನೇ ಹಂತ**

1. ಸ್ಲಂ ಜನರೇ ಮಂಡಳಿಗೆ ಅರ್ಜಿ ಸಲ್ಲಿಸಬೇಕು. (ಸಲ್ಲಿಸಿದ ಅರ್ಜಿಗೆ ಸ್ವೀಕೃತಿ ಚೀಟಿ ಪಡೆಯುವುದು ಕಠಿಣ)
2. ಮಂಡಳಿಯ ಕಾರ್ಯದರ್ಶಿಗೆ ರವಾನೆ
3. ಸಹಾಯಕ ಆಯುಕ್ತರಿಂದ (ಅದೇ ಕಛೇರಿ) ಪರಿಶೀಲನೆ.



06358
COMMUNITY HEALTH CELL
LIBRARY AND DOCUMENTATION UNIT
BANGALORE.

4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಅದೇ ಕಛೇರಿ). ಮುಂದಿನ ಕ್ರಮಕ್ಕಾಗಿ.
5. ವರ್ಕ್‌ಇನ್ಸ್‌ಪೆಕ್ಟರ್ ಇವರಿಂದ ತನಿಖೆ. (ಅದೇ ಕಛೇರಿ) ಮತ್ತು ವರದಿ ತಯಾರಿಸಿ ಮೇಲಧಿಕಾರಿಗಳಿಗೆ ಮಂಡಿಸುವುದು.

   ವರದಿ ಇದೇ ಹಂತಗಳಲ್ಲಿ ಮೇಲ್ಮಟ್ಟಕ್ಕೆ ರವಾನೆ.

### ಎರಡನೇ ಹಂತ

1. ಮಂಡಳಿ ಕಾರ್ಯದರ್ಶಿಯಿಂದ
   ಪ್ರಸ್ತಾವನೆ ಮತ್ತು ಡಿಕ್ಲೇರ್ ಮಾಡಲು ಶಿಫಾರಸ್ಸಿನೊಂದಿಗೆ ಜಿಲ್ಲಾಧಿಕಾರಿಗಳಿಗೆ ರವಾನೆ.
   (ಇಲ್ಲಿ ಅರ್ಜಿದಾರರಿಗೆ ಮಾಹಿತಿ ಕಳುಹಿಸುವುದಿಲ್ಲ)
2. ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತಿ
3. ಸಹಾಯಕ ಆಯುಕ್ತರಿಗೆ ಪರಿಶೀಲನೆಗಾಗಿ
4. ತಹಶೀಲ್ದಾರರು - ಸ್ಥಳ ಭೇಟಿ ನೀಡಿ ಪರಿಶೀಲನೆ ವರದಿ ಸಿದ್ಧಪಡಿಸುವುದು.
5. ಕಂದಾಯ ನಿರೀಕ್ಷಕರು - ಸ್ಥಳ ಪರಿಶೀಲನೆ ಮತ್ತು ವರದಿ ಸಿದ್ಧಪಡಿಸುವುದು.
6. ಸ್ಥಳೀಯ ಮಟ್ಟದ ಕಂದಾಯ ಇಲಾಖೆ ನೌಕರರಿಂದ ಪುನರ್ ತನಿಖೆ
   (ಅವರ ವರದಿ, ಕೆಳಗೆ ಬಂದ ದಾರಿಯಲ್ಲಿ ಮೇಲಕ್ಕೆ ರವಾನೆ)
7. ಜಿಲ್ಲಾಧಿಕಾರಿಗಳಿಂದ ಅಂಗೀಕಾರ

### ಮೂರನೇ ಹಂತ

1. ಸಾರ್ವಜನಿಕರಿಂದ ದೂರು ಆಹ್ವಾನದ ನೋಟೀಸು.
2. ದೂರು ಬಂದಲ್ಲಿ ಮುಂದಿನ ಕ್ರಮ
3. ದೂರಿಲ್ಲದೇ ಇದ್ದಲ್ಲಿ ಅದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟ. ಆಗ ಅದು ಪ್ರಾಥಮಿಕ ಅಧಿಸೂಚನೆ ಅಥವಾ 3 ಪ್ರಿ. ಎಂದಾಗುವುದು. **ಆಗ ಸ್ಲಂ ಅರ್ಧ ಡಿಕ್ಲೇರ್ ಆದಂತೆ.**

**ಸಂಪೂರ್ಣವಾಗಿ ಸ್ಲಂ ಎಂದು ಘೋಷಿಸಲು ಮೇಲೆ ಸೂಚಿಸಿದ ಹಂತಗಳನ್ನು ಪುನರಾವರ್ತಿಸಲಾಗುವುದು.**

ಈ ಮೇಲಿನ ಎಲ್ಲಾ ಹಂತಗಳಲ್ಲಿ ಸ್ಲಂ ಜನರಿಗೆ ಬೇಕಾದ ಮಾಹಿತಿಗಳನ್ನು ಅಧಿಕಾರಿಗಳು ಕೊಡುವುದಿಲ್ಲ. ಕೊಡಲು ನಿರಾಕರಿಸುವರು. ಸಂಬಂಧಿಸಿದ ಅಧಿಕಾರಿಗಳು ತನಿಖೆಗೆಂದು ಭೇಟಿ ನೀಡಿದಾಗ ಅವರು ಹೇಳಿದ್ದನ್ನು ಕೇಳಿ, ಕೇಳಿದ್ದಕ್ಕೆ ಉತ್ತರ ಕೊಟ್ಟು, ಕೊನೆಯಲ್ಲಿ ಆದದ್ದನ್ನು ಅನುಭವಿಸಬೇಕು.

ಒಂದು ವೇಳೆ ಯಾರಾದರೂ ದೂರು ಸಲ್ಲಿಸಿದರೆ ಮುಂದಿನ ಕ್ರಮ ಏನು ಮಾಡಬೇಕೆಂಬುದು ಅಧಿಕಾರಿ (ಪ್ರಿಸ್ಕ್ರೈಬ್ಡ್ ಅಥಾರಿಟಿ)ಗೆ ಮಾತ್ರ ತಿಳಿದಿರುತ್ತದೆ.



## ಸ್ಲಂ ಜನರು ವಾಸಿಸುವ ಜಾಗಕ್ಕೆ ಸಂಬಂಧಿಸಿದಂತೆ ಕುಟುಂಬಗಳಿಗೆ ದೊರೆಯುವ ಪತ್ರಗಳು

1. ಕೊಳಚೆ ನಿರ್ಮೂಲನಾ ಮಂಡಳಿಯಿಂದ ಗುರುತು ಪತ್ರ.
2. ಕೊಳಚೆ ನಿರ್ಮೂಲನಾ ಮಂಡಳಿಯ ಹಕ್ಕುಪತ್ರ.
3. ಆಶ್ರಯ ಯೋಜನೆಯಡಿ ವಸತಿ ಕಲ್ಪಿಸಿಕೊಡಲು ಮಂಜೂರಾತಿ ನೀಡಿದ ಪತ್ರ.
4. ನಗರಪಾಲಿಕೆಯವರು ಕೊಡುವ ಸ್ವಾಧೀನ ಪತ್ರ(ಅವರ ವ್ಯಾಪ್ತಿಯಲ್ಲಿ ಬರುವ ಸ್ಲಂಗಳಿಗೆ ಮಾತ್ರ)
5. ನಗರಪಾಲಿಕೆಯವರು ಕೊಡುವ ಆಶ್ರಯ ಯೋಜನೆ ಮಂಜೂರಾತಿ ಪತ್ರ.
6. ನಗರಪಾಲಿಕೆಯವರು ಕೊಡುವ ಹಕ್ಕುಪತ್ರ
7. ನಗರಪಾಲಿಕೆ/ಕೊಳಚೆ ನಿರ್ಮೂಲನಾ ಮಂಡಳಿಯವರು ಮನೆ ಕಟ್ಟಿಸಿ ಕೊಟ್ಟ ಮೇಲೆ ಲೀಸ್ ಮೇಲೆ ಸ್ವಾಧೀನಕ್ಕೆ ಕೊಡುವ ಪತ್ರ.

ಇವು ಯಾವುದು ಎಷ್ಟು ಕಾನೂನುಬದ್ಧವಾಗಿದೆ ಅಥವಾ ಕಾನೂನುಬದ್ಧವಾಗಿಲ್ಲ ಎಂಬುದರಲ್ಲಿ ಗೊಂದಲ. ಈಗಿದ್ದ ನಿಯಮ ಮುಂಬರುವ ಕೆಲವು ತಿಂಗಳಲ್ಲಿ ಬದಲಾಗುವುವು.

ಮೇಲಿನ ಎಲ್ಲಾ ರೀತಿಯ ಪತ್ರಗಳು ಲಂಚಕೊಟ್ಟಲ್ಲಿ ಯಾರಿಗಾದರೂ ಲಭ್ಯವಾಗುವುವು. ಕೊಳಚೆ ನಿರ್ಮೂಲನಾ ಮಂಡಲಿ ಪರಿಚಯ ಪತ್ರಗಳೂ ಸಹ ಮಾರಾಟಕ್ಕೆ ದೊರೆಯುವುದು. ಅದಕ್ಕಾಗಿ ಅಧಿಕಾರಿ ಮತ್ತು ಜನರ ಮಧ್ಯೆ ಕೆಲವು ದಲ್ಲಾಳಿಗಳು ಕೆಲಸ ನಿರ್ವಹಿಸುತ್ತಿದ್ದಾರೆ.

## ನಗರ ಕೊಳಚೆ ಪ್ರದೇಶಗಳ ಪರಿಸರ ಉತ್ತಮೀಕರಣ ಯೋಜನೆ (E.I.U.S)

ನಗರ ಕೊಳಚೆ ಪ್ರದೇಶಗಳ ಪರಿಸರ ಅಭಿವೃದ್ಧಿಗಾಗಿ EIUS ಎಂಬ ಯೋಜನೆಯನ್ನು ಕೇಂದ್ರ ಸರ್ಕಾರವು ಸ್ಲಂ ಜನರ ಮೂಲಭೂತ ಸೌಲಭ್ಯಗಳನ್ನೊದಗಿಸುವ ಉದ್ದೇಶದಿಂದ 1972 ರಲ್ಲಿ ಜಾರಿಗೆ ತಂದಿದೆ. ಒಬ್ಬ ವ್ಯಕ್ತಿಗೆ 800 ರೂಪಾಯಿ ಹಣಕಾಸು ನೀಡುವ (ಶೇಕಡಾ 75ರ ವರೆಗೆ) ಭಾರತ ಸರ್ಕಾರದ ಯೋಜನೆಯನ್ನು ನಗರಪಾಲಿಕೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಇವುಗಳ ಮೂಲಕ ಜಾರಿಗೊಳಿಸಲಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವನ ಮಟ್ಟವನ್ನು ಸುಧಾರಿಸುವುದು ಸದರಿ ಯೋಜನೆಯ ಉದ್ದೇಶ. ಈ ಯೋಜನೆಯಲ್ಲಿ ದೊರೆಯುವ ಕನಿಷ್ಠ ಸೌಲಭ್ಯಗಳನ್ನು ಪಡೆಯುವ ಹಕ್ಕು ಸ್ಲಂ ಜನರಿಗಿದೆ. ಕನಿಷ್ಠ ಸೌಲಭ್ಯಗಳೆಂದರೆ:

1. ನೀರು ಸರಬರಾಜು : 150 ವ್ಯಕ್ತಿಗಳಿಗೆ ಒಂದು ನಲ್ಲಿ.
2. ಚರಂಡಿ : ಕೊಳೆ ನೀರು ಸರಾಗವಾಗಿ ಹರಿದುಹೋಗುವಂಥ ತೆರೆದ ಚರಂಡಿ.
3. ಮಳೆ ನೀರಿನ ಚರಂಡಿಗಳು : ಮಳೆ ನೀರನ್ನು ಶೀಘ್ರವಾಗಿ ಹೊರ ಹರಿಸುವ ಸಲುವಾಗಿ ದೊಡ್ಡ ಚರಂಡಿಗಳು.

| | | |
|---|---|---|
| 4. ಸಾಮೂಹಿಕ ಸ್ನಾನ ಗೃಹಗಳು | : | 20 ರಿಂದ 50 ಜನರಿಗೆ ಒಂದು ಸ್ನಾನಗೃಹ. |
| 5. ಸಾಮೂಹಿಕ ಶೌಚಾಲಯಗಳು | : | 20 ರಿಂದ 50 ಜನರಿಗೆ ಒಂದು ಶೌಚಾಲಯ. |
| 6. ಬೀದಿ ದೀಪ | : | 30 ಮೀಟರುಗಳ ಅಂತರಕ್ಕೆ ಒಂದು ದೀಪದ ಕಂಬ. |
| 7. ಕಾಲು ಹಾದಿಯನ್ನು ಅಗಲಗೊಳಿಸುವುದು ಮತ್ತು ಹಾದಿ ನಿರ್ಮಾಣ | : | ಈಗಾಗಲೇ ಇರುವ ರಸ್ತೆಗಳ ಕೆಸರು ಮತ್ತು ಕೊಚ್ಚೆಯನ್ನು ತಪ್ಪಿಸಿ ಅಗಲಗೊಳಿಸಿ ನಿರ್ಮಿಸಿದ ಹಾದಿಗಳ ಮೇಲೆ ಪಾದಚಾರಿಗಳು, ಬೈಸಿಕಲ್ಲುಗಳು ಮತ್ತು ಕೈಗಾಡಿಗಳು ಸುಗಮವಾಗಿ ಓಡಾಡುವಂತೆ ಅವಕಾಶ ಕಲ್ಪಿಸುವುದು. |

**ಇವುಗಳಲ್ಲದೆ**

1. ಸಮುದಾಯ ಕೇಂದ್ರಗಳು. ಬಡಜನರು ಸಾಮೂಹಿಕವಾಗಿ ಕೆಲಸ ಮಾಡಲು ಷೆಡ್ಡು
2. ಕಸದ ವಿಲೇವಾರಿ
3. ನಿರ್ವಹಣೆ ಮುಂತಾದವುಗಳನ್ನು ಒಳಗೊಂಡಿರುತ್ತದೆ.

❀❀❀

# ಜನಸಹಯೋಗದ ಪ್ರಕಟಣೆಗಳು

1. ಓಟಿನ ಕಥೆ - ಚಿತ್ರಪಟಗಳು

2. ಓಟಿನ ಕಥೆ - ಕಿರುಪುಸ್ತಕ

3. ಯಾರಿಗೆ ಬಂತು ಅಧಿಕಾರ - ಸಂವಿಧಾನದ 74ನೇ ತಿದ್ದುಪಡಿ ಕುರಿತ ಚಿತ್ರಪಟಗಳು

4. ಯಾರಿಗೆ ಬಂತು ಅಧಿಕಾರ - ಸಂವಿಧಾನದ 74ನೇ ತಿದ್ದುಪಡಿ ಕುರಿತ ಕಿರುಪುಸ್ತಕ

5. ಸ್ಲಂ ದನಿ ಧ್ವನಿಸುರುಳಿ - ಸ್ಲಂ ಕಾಯ್ದೆ ಕುರಿತ ಮಾಹಿತಿ ಮತ್ತು ಹಾಡುಗಳು

6. ಬೆಂಗಳೂರಿನ ಅಭಿವೃದ್ಧಿ ಸಂಸ್ಥೆಗಳ ಮಾಹಿತಿ

7. ಕೇಂದ್ರ ಸರಕಾರದ ಕೊಳಗೇರಿಗಳ ಅಭಿವೃದ್ಧಿ ಯೋಜನೆಗಳ ಮಾಹಿತಿ

*ಪ್ರತಿಗಳಿಗಾಗಿ ಸಂಪರ್ಕಿಸಿ :*


## ಜನಸಹಯೋಗ

ನಂ. 5/B/4, ರಂಕಾಪಾರ್ಕ್ ಅಪಾರ್ಟ್‌ಮೆಂಟ್ಸ್, ಲಾಲ್‌ಬಾಗ್ ರಸ್ತೆ,
ರಿಚ್ಮಂಡ್ ಸರ್ಕಲ್ ಹತ್ತಿರ, ಬೆಂಗಳೂರು - 560 027
ದೂರವಾಣಿ : 080 - 2243723

Ranka Park Apts Lal Bagh Rd
Near Rchmd Circle, Bangalore - 27